# ಎಲ್ಲಿ ನೋಡಿದರೂ ಹಣ್ಣು!



ಸಾಗರದ ಕಡೆ ಹೋದರೆ ಜೋಗವನ್ನಷ್ಟೇ ನೋಡಿಬಂದರೆ ಸಾಲದು. ಅದೇ ಪರಿಸರದಲ್ಲಿ ಹಿಂಡ್ಲೂಜ ರಾಜೇಂದ್ರ ಅವರ ತೋಟವಿದೆ. ಅದು ಹಣ್ಣುಗಳ ಕಾಶಿ. ನೂರಾರು ಬಗೆಯ ಹಣ್ಣುಗಳು ಅಲ್ಲಿ ತೂಗಾಡುತ್ತಿವೆ. ನೋಡಿದಲ್ಲೆಲ್ಲ ಗಿಡ, ಕೈಚಾಚಿದಲ್ಲೆಲ್ಲ ಹಣ್ಣು.

■ ವಿ. ಬಾಲಕೃಷ್ಣ ಶಿರ್ವ

ಸಾಗರದ ಬಸ್ ಸ್ಟಾಪ್‌ನಿಂದ 5 ಕಿ.ಮೀ. ಪಯಣಿಸಿ, ಎಡಬದಿಯ ರಸ್ತೆಯಲ್ಲಿ ತಿರುವು ಪಡೆದು 2 ಕಿ.ಮೀ. ಸಾಗಿದರೆ ಸಿಗುವುದೇ ಹಿಂಡ್ಲೂಜ ರಾಜೇಂದ್ರ ಕುಟುಂಬದವರ ತೋಟ. ಇದನ್ನು ತೋಟವೆನ್ನುವುದು ಹೇಗೆ; ರಸ್ತೆಬದಿಯಿಂದ ಮನೆಗೆ ಹೋಗುವ ದಾರಿಯಲ್ಲಿ ಬೃಹತ್ತಾದ ಕಾಡು ಬೆಳೆಸಿದ್ದಾರೆ. ಇಲ್ಲಿ ಎಲ್ಲಾ ರೀತಿಯ ಮರಗಳಿವೆ.

ರಾಜೇಂದ್ರರವರೇ ಹೇಳುವಂತೆ ತೋಟದ ರೂಪದ ಆ ಕಾಡನ್ನು ಗುದ್ದಲಿ–ಹಾರೆ ಉಪಯೋಗಿಸದೆ ಹಾಗೆಯೇ ಬಿಡಲಾಗಿದೆ. ತರಗೆಲೆ, ಹೆಗ್ಗೆ ಬಿದ್ದದ್ದು ಕೊಳೆತು ಗೊಬ್ಬರವಾಗಿ ಮರಗಿಡಗಳು ಹೆಮ್ಮರವಾಗಿ ಬೆಳೆದಿದೆ. ಅಲ್ಲಿಂದ ಮುಂದೆ ಅವರ ತೋಟದ ನಡುವಿನಲ್ಲಿಯೇ ಮನೆಯಿದೆ. ಮನೆಯ ಮುಂಭಾಗ ಮತ್ತು ಇಕ್ಕೆಲಗಳಲ್ಲಿ 500ಕ್ಕೂ ಹೆಚ್ಚಿನ ಬಗೆಯ ಹಣ್ಣಿನ ಗಿಡಗಳನ್ನು ಬೆಳೆಸಲಾಗಿದೆ. ಕೈ ಚಾಚಿದಲ್ಲೆಲ್ಲ ಹಣ್ಣು!

ರಾಜೇಂದ್ರ ಅವರದ್ದು ಕೂಡು ಕುಟುಂಬ. ಮನೆಯ ಸದಸ್ಯರೆಲ್ಲರೂ ತೋಟದಲ್ಲಿನ ಗಿಡ–ಮರಗಳಂತೆ ಒಟ್ಟಾಗಿದ್ದಾರೆ.

ತೋಟ ತೋರಿಸಲಿಕ್ಕೆ ರಾಜೇಂದ್ರರು ಕರೆದೊಯ್ಯುವಾಗ, ಅಂಗಳಕ್ಕೆ ಕಾಲಿಡುತ್ತಿದ್ದಂತೆಯೇ ಭಾರೀ ಚಪ್ಪರದಲ್ಲಿ ಇಳಿಬಿದ್ದ ಬೃಹತ್ತಾದ ಪುಟ್ಬಾಲಿನಂತೆ ಕಾಣುವ ಹಣ್ಣುಗಳು, ಅದನ್ನು ತೋರಿಸುತ್ತಾ ಇದೇ 'ಗ್ಯಾಕ್' ಹಣ್ಣು ಎಂದರು. ಚಪ್ಪರ ತುಂಬಾ ಇಳಿಬಿದ್ದ 'ಗ್ಯಾಕ್' ಹಣ್ಣುಗಳು ಆಕರ್ಷಕವಾಗಿದ್ದವು. ಗ್ಯಾಕ್ಸ್ ಕಾಯಿಗಳು ಹಸಿರಾಗಿದ್ದು ಹಳದಿ ವರ್ಣಕ್ಕೆ ತಿರುಗುತ್ತಾ ಪೂರ್ತಿ ಹಣ್ಣಾದ ನಂತರ ಕೆಂಪಾಗುತ್ತದೆ. ಅದರ ದಪ್ಪ ಸಿಪ್ಪೆಯನ್ನು ಬಿಡಿಸಿದಾಗ, ಕೆಂಪುಬಣ್ಣದ ತಿರುಳು



